**ಊರಿನ ಚಹರೆ ಬದಲಾಗಬಹುದು, ಬೆಳೆಯುತ್ತಿರುವ ಬೆಳೆಗಳು ಬದಲಾಗಬಹುದು, ಜನ, ರಸ್ತೆ, ಗುಣಗಳು ಹೊಸತಾಗಬಹುದು. ಆದರೆ ಯಾವುದೇ ಊರಿಗೆ ಇರುವ ಭೌಗೋಳಿಕ ಅಸ್ತಿತ್ವ ಅದನ್ನು ಎಂದೆಂದೂ ಬೇರು ಸರಿಯದಂತೆ ಕ್ಯಾಲಿಬ್ರೇಟ್ ಮಾಡುತ್ತಲೇ ಇರುತ್ತದೆ. ಅಂಥದ್ದೊಂದು ಊರು ದಾವಣಗೆರೆ. ಸಿಟ್ಟು, ಛಲ, ಸ್ವಾಭಿಮಾನ, 'ನಾನತ್ವ' ಎಂಬ ಸಹಜ ಅಹಂ ಮತ್ತು ಅಪರಿಮಿತ ಸಾಧ್ಯತೆಗಳ ಅನ್ವೇಷಣೆ ಇವುಗಳನ್ನು ಮೂಲದ್ರವ್ಯವಾಗಿಸಿಕೊಂಡ ದಾವಣಗೆರೆ, ಸಿಟ್ಟಿಗೆ ಕರಗುವ ನೆಲವೂ ಹೌದು.**

## ಮನದ ಭಾಷೆಯ 'ಚೆನ್ನುಡಿ'

'ನಾವಾಡುವ ನುಡಿಯೇ ಕನ್ನಡ ನುಡಿ' ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ 'ಚೆನ್ನುಡಿ' ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.

ಉಟ್ಟು ಕೈಗೆ ಮಾಸಲು ಬಳೆಗಳನ್ನು ತೊಟ್ಟು, ಕುತ್ತಿಗೆಗೆ ನಾನಾ ರೀತಿಯ ದಾರಗಳನ್ನು ಕಟ್ಟಿಕೊಂಡು ಅದಕ್ಕಿಷ್ಟು ಪಿನ್ನುಗಳನ್ನೂ, ಯಾವ್ಯಾವುದೋ ಸಣ್ಣ ಸಣ್ಣ ಪದಕಗಳನ್ನು ಪೋಣಿಸಿಕೊಂಡಿದ್ದ ಅವಳು ಕಾಣಿಸಿದಳು. ಕೈಲಿ ನೆಗ್ಗಿ ನಜ್ಜುಗುಜ್ಜಾಗಿದ್ದ ಒಂದು ಬಟ್ಟಲು ಇತ್ತು.

'ಯಾರಮ ನೀನು?' ಅಕ್ಕ ಕೇಳಿದಳು.

'ಉಣ್ಣಾಕ್ ಬೇಕು, ಎನರ ತಂದು ಹಾಕು' ಅತ್ತಲಿಂದ ಗಟ್ಟಿ ಧ್ವನಿ.

'ಎನ?' ಅಕ್ಕನಿಗೆ ಕಿವಿ ನಂಬಲಾಗಲಿಲ್ಲ.

'ಯಾಕ ಕಿವಿ ತೂತ ಬಿದ್ದಾವಾ? ಉಣ್ಣಾಕ ಎನರ ಬೇಕು ಅಂದೆ' ಆಕೆ ಮತ್ತಷ್ಟು ಸೆಡವಿನಿಂದ ಹೇಳಿದಳು.

'ಎನೂ ಇಲ್ಲ ಮುಂದುಕ್ ವೋಗು' ಅಕ್ಕ ಸ್ವಲ್ಪ ಹಿಂಜರಿಕೆಯಿಂದಲೇ ಹೇಳಿದಳು.

'ಏ ಯಾರಿಗ್ ಏಳ್ತಿ ಮುಂದುಕ್ ವೊಗು ಮುಂದುಕ್ ವೊಗು ಅಂತ? ಅಲ್ಲಿಂದ ನಾಕ್ ಮನಿ ಆದ್ವು. ಅಂಗ ಎಲ್ಲರೂ ಮುಂದುಕ್ ವೋಗು ಅಂದ್ರೆ ಎಲ್ಲಿಗ್ ವೋಗನ? ಮುಚ್ಚಿಗ್ಯಂದು ಉಣ್ಣಾಕ್ ಏನರ ಇದ್ರ ತಾ' ಎಂದು ಹೇಳಿ ನಿಂತಳು. ಆಕೆಯೇನು ಜುಪ್ಪನ್ನಲಿಲ್ಲ.

ಅಷ್ಟು ಹೊತ್ತಿಗೆ ಇಷ್ಟೆಲ್ಲಾ ಕೇಳಿಸಿಕೊಂಡ ಅಮ್ಮನಿಗೆ ಕುತೂಹಲ. ಅವರೂ ರೊಟ್ಟಿ ತಟ್ಟುತ್ತಿದ್ದ ಹಿಟ್ಟಿನ ಕೈ ಹಿಂದಕ್ಕೆ ಮಾಡಿಕೊಂಡು ಹೊರಗೆ ಬಂದರು. ಅವಳನ್ನು ನೋಡಿ 'ಯಾಕವಾ ಏನ್ ಮಾತಾಡ್ತೀ? ಮುಂದ್ಕ್ ವೋಗು ಅಂದ್ರೆ ತಿಳಿಯಲ್ಲೇನ್ ನಿನಿಗೆ? ಯಾರ್ ನೀನು' ಎಂದು ಜೋರು ಮಾಡಿದ ತಕ್ಷಣ ಆಕೆ ಮೆತ್ತಗಾದಳು.

'ಅಮಾ, ಬೈಬ್ಯಾಡ. ನಾನಮ ಹುಚ್ಚಿ. ಹುಚ್ ನಿಂಗವ್ವ ದುಗ್ಗಮ್ಮುನ್ ಗುಡಿ ಹತ್ರ ಇದ್ನ್ಯಮ ಮುಂಜೆಲೆ ಎದ್ದು ಇತ್ತಗ್ ಬಂದೆ. ಉಣ್ಣಾಕ ಎನರೆ ಇದ್ರ ಹಾಕಮ' ಎಂದು ಮೆದು ಚೌಕಾಸಿಯ ಭಾಷೆಗೆ ಬದಲಾಯಿಸಿದಳು. ಆಮೇಲೆ ತಿಳಿದದ್ದು ಆಕೆ ನಿಜವಾಗಿಯೂ ಮಾನಸಿಕ ಸಮತೋಲನ ಕಳೆದುಕೊಂಡಿದ್ದ ಕಾರಣಕ್ಕೆ ಅವಳನ್ನು ಹುಚ್ ನಿಂಗವ್ವ, ಅಲಿಯಾಸ್ ಹುಚ್ಚಿ ಎಂದು ಜನ ಕರೆಯುತ್ತಿದ್ದರು. ಉಚ್ಚಂಗಿ ದುರುಗದ ಯಲ್ಲಮ್ಮನ ಪಟ್ಲ ಹೊತ್ತುಕೊಂಡು ಓಡಾಡುತ್ತಿದ್ದ ಆಕೆ ಆಗಾಗ ಅದನ್ನು ಎಲ್ಲೋ ಎತ್ತಿಟ್ಟು ಮನೆಮನೆಗೆ ಊಟ ಕೇಳಿಕೊಂಡು ಹೋಗುತ್ತಿದ್ದಳು. ಭಿಕ್ಷೆ ಕೇಳಬಾರದು ಎನ್ನುವುದು ಪಟ್ಲ ಹೊತ್ತವರ ನಿಯಮ. ಅದನ್ನ ಆಕೆ ಪಾಲಿಸುತ್ತಿದ್ದಳು. ಆದರೆ ಎಲ್ಲರೂ ತನ್ನನ್ನು ಹುಚ್ಚಿ ಹುಚ್ಚಿ ಎಂದು ಕರೆಯುವುದನ್ನ ನೋಡಿ, ಆ ಹೆಸರನ್ನ ತನಗೆ ತಾನೇ ಆರೋಪಿಸಿಕೊಂಡು 'ಯಾರ್ ನೀನು' ಅಂತ ಕೇಳಿದರೆ 'ಹುಚ್ಚಿ, ಹುಚ್ ನಿಂಗವ್ವ' ಎಂದು ಹೇಳೇ ಬಿಡುತ್ತಿದ್ದಳು.

ಜೋರು ಮಾಡುತ್ತಿದ್ದ ಅವಳಾ ಧ್ವನಿ ಸ್ವಲ್ಪ ಇಳಿದು ಸಣ್ಣಗೆ ಬದಲಾದದ್ದನ್ನ ಕಂಡು ಅಮ್ಮನಿಗೆ ನಗು ಬಂತು. ಆದರೂ ಗಂಟಿಕ್ಕಿದ ಹುಬ್ಬನ್ನು ಇಳಿಸದೆ 'ಇಲ್ಲೋಗವ ಇಷ್ಟೊತ್ತಿಗೆ ಎಲ್ಲಿಂದ ಮಾಡಿ ಹಾಕನ. ಸಾಯ್ಕಂಲಕ್ ಬಾ ವೊಗು' ಎಂದರು.

'ಆ ಸಾಂಕ್ಯಲಕ್ಕಾ? ಅಲೀ ಮಟ ನಾವೇನ್ ವಣಗನಾ? ವಟ್ಟೆ ಎನಾಗಬಕು ನಂದು ಏನರ ಇದ್ರ ಆಕು. ಇಲ್ಲಾಂದ್ರ ಒಟು ಅಕ್ಕೀನಾರಾ ಕೊಡು' ಎಂದು ಸಿಡುಕಿದಳು.

ಬೇರೆ ಯಾರಾದರೂ ಹೀಗೆ ಮಾತಾಡಿದರೆ ಬಾಯ್ತುಂಬಾ 'ದೇಸಿ' ಬೈಗುಳ ಸಿಗುತ್ತಿದ್ದುದು ಗ್ಯಾರಂಟಿ. ಬೇಡಲಿಕ್ಕೆ ಬಂದಿದಾಳೆ, ಆದರೆ ಮಾತು ನೋಡಿದರೆ ಸಾವ್ಕಾರ್ರು ಮಾತಾಡಿದಂಗೆ ಮಾತಾಡ್ತಳೆ ಅಂತ ನಾನೂ ಅಕ್ಕನೂ ಬೆರಗಾಗಿ ನೋಡುತ್ತಿದ್ದೆವು. ಅಮ್ಮ ಅವ್ಳಿಗೆ ಇನ್ನೇನು ಉಗಿಯಕ್ಕೆ ಶುರು ಮಾಡ್ತರೆ ಅನ್ನೋದು ನಮ್ಮ ನಂಬಿಕೆಯಾಗಿತ್ತು. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಅಮ್ಮ ಅವಳನ್ನು ಒಮ್ಮೆ ದುರುಗುಟ್ಟಿ ನೋಡಿ ಒಳಗೆ ಹೋಗಿ ಎರಡು ಬಿಸಿ ರೊಟ್ಟಿ, ಚಟ್ನಿ ಪುಡಿ, ಮಸುರು, ಒಂದ್ ಅರ್ಧ ಸೌತಿಕಾಯಿ, ಅರ್ಧ ಉಳ್ಳಾಗಡ್ಡಿ, ಎರಡ್ ಹಸಿಮೆಣಸಿನಕಾಯಿ ನಮ್ಮ ಕೈಲಿ ಕಳಿಸಿದರು.

ಹಾಗೇ ನೋಡಿದರೆ ಈ ಸಂದರ್ಭದಲ್ಲಿ ಊಟ ಹುಟ್ಟದಿರಲಿಕ್ಕೆ ಬೇಕಾದ ಎಲ್ಲಾ ಅಂಶಗಳೂ ಇದ್ದವು. ಆದರೆ ಮನುಷ್ಯ ಗುಣ ನೋಡಿ, ಆಕೆಗೆ ಊಟ ಹುಟ್ಟಿದ್ದಷ್ಟೇ ಅಲ್ಲ, ಆಕೆಯ ಸಿಟ್ಟನ್ನೂ ಈ ಸಂದರ್ಭ ಜೀರ್ಣಿಸಿಕೊಂಡುಬಿಟ್ಟಿತ್ತು.

ಬಡವನ ಸಿಟ್ಟು ದವಡೆಗೆ ಮೂಲ ಎಂಬುದು ಸಹಜ ಎಂದು ನಂಬುವ ಸಮಾಜದ ನಡುವೆ, ಹೀಗೆ ಸಿಟ್ಟಿಗೆ ಕರಗುವ ನೆಲಗಳೂ ಇವೆ. ಅದರಲ್ಲಿ ದಾವಣಗೆರೆಯೂ ಒಂದು ಎಂದು ಹೇಳಲಿಕ್ಕೆ ಯಾವ ಅಡ್ಡಿಯೂ ಇಲ್ಲ.

ಏಕೆಂದರೆ ಆ ಊರಿನ ಮೂಲ ದ್ರವ್ಯವೇ ಸಿಟ್ಟು, ಛಲ, ಸ್ವಾಭಿಮಾನ, 'ನಾನತ್ವ' ಎಂಬ ಸಹಜ ಅಹಂ ಮತ್ತು ಅಪರಿಮಿತ ಸಾಧ್ಯತೆಗಳ ಅನ್ವೇಷಣೆ.

'ಕಳಕಣಕೇನೈತಪ? ಯಾವ್ದೋ ಒಂದು, ಏನಾಕ್ಕತಿ ಅಂತ ನೋಡಿದ್ರಾತು!' ಎನ್ನುವ ಕುತೂಹಲ.

ಹಾಗಂತ ಸಿಟ್ಟಿಗೆ ಪ್ರತಿಯಾಗಿ ನೀವೂ ಸಿಟ್ಟು ಮಾಡಿಕೊಂಡಿರೋ, ಅದಕ್ಕೆ ಗುಂಜಿಯಷ್ಟೂ ಬೆಲೆಯಿರುವುದಿಲ್ಲ.

'ಹ್ವಗ್ಗಾ ಹೋಗ್ ನನ ಮಗನೆ. ಕ್ಯರೆ ಕುಟಗ್ ಮುಂಚಿಗುಟ್ಟಿಕ್ಯಂಡ್ರೆ ಮುಕ್ಕಿ ಯಾವಂದು ವಣಗದು?' ಎಂದು 'ಬಳಗ' ವಗದು ಸಾಗುತ್ತಾರೆ. ಮತ್ತೆ ಸಿಕ್ಕಾಗ ತಮಾಶಿ ಮಾಡುತ್ತಾರೆ, ಹಿಂದಿನದು ನೆನಪೇ ಇಲ್ಲದಂತೆ ಇದ್ದು ಬಿಡುತ್ತಾರೆ. ಭಾವನೆಗಳ ಭಾರ ಇಲ್ಲಿಲ್ಲ.

ಈ ಊರು ಒಂದು ಥರಾ ಅತ್ತಿತ್ತ ಆಧಾರ ಇಲ್ಲದ ಹಾಗೆ ಒಂಟಿ ದೀಪ ನೀರಿನ ಮೇಲೆ ತೇಲುತ್ತಿದೆಯೇನೋ ಎನ್ನಿಸುವ ಹಾಗೆ ಮ್ಯಾಪಿನಲ್ಲಿ ಕಾಣುತ್ತದೆ. ಕರ್ನಾಟಕದ ನಟ್ಟ ನಡುವು, ಅಂದರೆ ಕರ್ನಾಟಕದ ಗುರುತ್ವಕ್ಕೆ ಒಂದು ಬಿಂದು ಇಟ್ಟರೆ, ಆ ಬಿಂದು ದಾವಣಗೆರೆಯೇ ಆಗಿರುತ್ತದೆ ಎಂದು ನನ್ನ ವಿಜ್ಞಾನ ಶಿಕ್ಷಕರು ಹೈಸ್ಕೂಲಿನಲ್ಲಿ ಪಾಠ ಮಾಡುತ್ತಿದ್ದಾಗ ಹೇಳಿದ ಕೂಡಲೇ ನನಗಾದ ರೋಮಾಂಚನ ಇನ್ನೂ ಸ್ಪಷ್ಟವಾಗಿ ನೆನಪಿದೆ.

ನಟ್ಟ ನಡುವು. ನಟ್ಟಿರುಳು. ನಡು ಮುಂಜಾವು. ನಡು ಮಧ್ಯಾಹ್ನ, ನಡು ರಾತ್ರಿ. ನಡು ರಸ್ತೆ. ನಡು ನೀರು. ಇತ್ಯಾದಿ ಇತ್ಯಾದಿ. ಈ ನಡು ಎನ್ನುವ ಪದ ಹೇಗೆ ಬಳಕೆಯಾಗುತ್ತದೆ ಎನ್ನುವುದನ್ನು ಗಮನಿಸಿದರೆ, ಎಲ್ಲಾ ಕಡೆಯೂ ಇದು ವಹಿಸುವ ಗುರುತರ ಪಾತ್ರ ಅರಿವಾಗುತ್ತದೆ. ಆಂಗಿಕ ರಚನೆಯಲ್ಲಿ ಆಗಲೀ, ಸಂಗೀತದಲ್ಲಾಗಲೀ ನಡು ಎನ್ನುವುದು

